# ರೆಡಿ ಟು ವೇರ್ ಸೀರೆ; ಮಿಂಚುವಳು ನೀರೆ

**ಸಾಂಪ್ರದಾಯಿಕ ಸೀರೆ ಉಡಲು ಸಮಯ ಬೇಕು ಎಂಬುದೇ ಹಲವರು ಸೀರೆ ಉಡದಿರಲು ಕಾರಣ. ಈಗ 'ರೆಡಿ ಟು ವೇರ್' ಸೀರೆ ಬಂದಿದ್ದು ಒಂದು ನಿಮಿಷದೊಳಗೆ ಸೀರೆಯುಟ್ಟು ಸಂಭ್ರಮಿಸಬಹುದು. ಈ 'ಒನ್ ಮಿನಿಟ್' ಸೀರೆ ಫ್ಯಾಷನ್ ಟ್ರೆಂಡ್ ಸಹ ಆಗಿದೆ.**

**■ ಆಶಾ ಎಸ್. ಕುಲಕರ್ಣಿ**



ಇದೀಗ ತಾನೇ ಹದಿಹರೆಯಕ್ಕೆ ಕಾಲಿಟ್ಟ ನೈನಾಳಿಗೆ ಸೀರೆ ಉಡುವ ಆಸೆ. ಐದು ಗಜ ಸೀರೆ ಉಡಲು ಸಮಯ ತುಂಬ ಬೇಕು, ಜೊತೆಗೆ ಎಲ್ಲಿ ಬಿದ್ದುಹೋಗುತ್ತದೋ ಎಂಬ ಭಯ. ನೀಟಾಗಿ ಉಡಲು ಬರದು ಎಂಬ ಬೇಜಾರು. ಈ ಎಲ್ಲ ಸಮಸ್ಯೆಗಳನ್ನು ಅರಿತ ಫ್ಯಾಷನ್ ವಿನ್ಯಾಸಗಾರರು ಇದೀಗ ಒಂದು ನಿಮಿಷದಲ್ಲಿ ಸೀರೆ ಉಡುವ 'ರೆಡಿ ಟು ವೇರ್' ಸೀರೆಯನ್ನು ಮಾರುಕಟ್ಟೆಗೆ ತಂದಿದ್ದು, ಅದೇ ಫ್ಯಾಷನ್ ಟ್ರೆಂಡ್ ಎನಿಸಿದೆ.

ರೆಡಿ ಟು ವೇರ್ ಸೀರೆ ಫ್ಯಾಷನ್‌ಗೆ ತಕ್ಕಂತೆ ನಿತ್ಯನೂತನವಾಗಿ ಕಂಗೊಳಿಸುತ್ತಿದೆ. ಎಷ್ಟೇ ಆಧುನಿಕ ಉಡುಪು ತೊಡುವ ಮಹಿಳೆಯರೂ ಕೂಡ ಒಂದಿಲ್ಲೊಂದು ರೇಷ್ಮೆ ಸೀರೆಯನ್ನಾದರೂ ತಮ್ಮ ವಾರ್ಡ್‌ರೋಬ್‌ನಲ್ಲಿ ಇಡುತ್ತಾರೆ. ಸೀರೆಗಳಲ್ಲಿನ ವೈವಿಧ್ಯಮಯ, ಬೆರಗು ಮೂಡಿಸುವಂತಹ ವಿನ್ಯಾಸ, ಅಂಚುಗಳಲ್ಲಿ ವಿಭಿನ್ನತೆ, ಸೆರಗಿನಲ್ಲಿ ಕಲಾತ್ಮಕ ನೇಯ್ಗೆ ಮುಂತಾದ ಸೆಳೆಯುವ ಗುಣ ಇರುವುದರಿಂದ ಇದರ ಅಂದಕ್ಕೆ ಮನಸೋಲದವರೇ ಇಲ್ಲ.

ವಯಸ್ಸಿನ ನಿರ್ಬಂಧ, ಹಳೆ ತಲೆಮಾರು, ಹೊಸ ತಲೆಮಾರಿನ ಎಲ್ಲ ಮಹಿಳೆಯರ ಅಚ್ಚುಮೆಚ್ಚಿನ ಸೀರೆಗಳು ಸಂಪ್ರದಾಯಕ್ಕೂ ಫ್ಯಾಷನ್‌ಗೂ ಸೈ ಎನಿಸಿವೆ. ವಸ್ತ್ರವಿನ್ಯಾಸಕಾರರು ಫ್ಯಾಷನ್ ಪ್ರಿಯರಿಗೋಸ್ಕರ ಹೊಸ ಹೊಸ ಪ್ರಯೋಗ ಮಾಡಲು ತರಹೇವಾರಿ ಸೀರೆಗಳನ್ನೇ ಆಯ್ದುಕೊಳ್ಳುತ್ತಿದ್ದಾರೆ. ಮಹಿಳೆಯರು ಶುಭ ಸಮಾರಂಭಗಳಿಗೆ ಹೋಗಬೇಕೆಂದರೆ, ಅವರ ಮೊದಲ ಆಯ್ಕೆ ಟ್ರೆಡಿಷನಲ್ ಲುಕ್ ನೀಡುವ ಸೀರೆಗಳು. ಸೀರೆಯಲ್ಲಿಯೇ ಹೊಸ ಹೊಸ ಪ್ರಯೋಗಗಳನ್ನು ಮಾಡಲು ಮುಂದಾದ ವಸ್ತ್ರವಿನ್ಯಾಸಕಾರರು ಇದೀಗ ಅತ್ಯಂತ ಸುಲಭವಾಗಿ ಧರಿಸಬಹುದಾದ ಸೀರೆಯ ವಿಭಿನ್ನ ವಿನ್ಯಾಸ ಮಾಡಿ